# ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು



ಆಶಿಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಜುಲೈ 2012

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬೈಫೈಯ್ಥ್ ಡಿಸೈನ್ಸ್

Contact Information:
All Peoples Church & World Outreach
2nd Floor, No. 7M, 2nd Block,
HRBR Layout, Kalyan Nagar, Bangalore 560 043
Karnataka, INDIA

Phone: +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - Giving Birth to the purpose of God)

# ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

# ವಿಷಯಸೂಚಿ

| | | |
|---|---|---|
| 1. | ಪೀಠಿಕೆ | 1 |
| 2. | 'ಮರಿಯಳ ಅದ್ಭುತ' ದಿಂದ ಪಾಠಗಳು | 2 |
| 3. | ನಿನ್ನಲ್ಲಿ ಇಟ್ಟಿರುವ ಠೇವಣಿ | 9 |
| 4. | ಪ್ರಾರ್ಥನೆಯಿಂದ ಜನನ ನೀಡುವುದು | 13 |
| 6. | ನುಡಿದ ವಚನ | 17 |
| 7. | ಪರಿಶ್ರಮ ಶೀಲ ಕೆಲಸ | 20 |

# 1

# ಪೀಠಿಕೆ

ದೇವರು ತನ್ನ ಉದ್ಧೇಶಗಳನ್ನು ಭೂಮಿಯ ಮೇಲೇ ಬಿಡುಗಡೆಗೊಳಿಸಲು ಅನೇಕ ಬಾರಿ ದೇವಧೂತರನ್ನು ಸಾಧನವಾಗಿ ಉಪಯೋಗಿಸಿದ್ದಾನೆ ಎಂದು ಸತ್ಯವೇದವು ಪ್ರಕಟಿಸುತ್ತದೆ. ಹಲವು ಬಾರಿ ಮಾನವನ ಮೂಲಕ ಬಿಡುಗಡೆಗೊಳಿಸಿದ್ದಾನೆ. ದೇವರು ಭೂಮಿಯ ಮೇಲೆ ತನ್ನ ಉದ್ಧೇಶಗಳನ್ನು ಸಾಮಾನ್ಯರಾದ ನನ್ನ ಮತ್ತು ನಿಮ್ಮ ಮೂಲಕ ಬಿಡುಗಡೆ ಮಾಡುತ್ತಿದ್ದಾನೆಂಬುದು ಇದರ ಅರ್ಥವಾಗಿದೆ.

ನೀವು ದೇವರೊಂದಿಗೆ ನಡೆಯುವಾಗ ಆತನು ಭೂಮಿಯ ಮೇಲೆ ನಿಮ್ಮ ಮೂಲಕ ಬಿಡುಗಡೆ ಮಾಡಲಿರುವ ಉದ್ಧೇಶಗಳನ್ನು ಮತ್ತು ಯೋಜನೆಗಳನ್ನು ಕಂಡುಕೊಳ್ಳುವಿರಿ. ಇದರಲ್ಲಿ ಹಲವು ಮಹತ್ವಪೂರ್ಣವಾದವು - ಕನ್ಯೆ ಮರಿಯಳಲ್ಲಿ ದೇವಕುಮಾರನ ಜನನ ಇದಕ್ಕೆ ಮುಖ್ಯ ಉದಾಹರಣೆ. ಮತ್ತೆ ಕೆಲವು ಅಷ್ಟು ಮಹತ್ವಪೂರ್ಣವಾದವುಗಳಿರಲಾರವು. ಉದಾಹರಣೆಗೆ, ನಾಗರೀಕತೆಯ ಅರಿವಿಲ್ಲದ ಹಳ್ಳಿಯಲ್ಲಿ ಒಂದು ಶಿಶುವಿಹಾರ ಸ್ಥಾಪಿಸಿದರೆ ಅದು ಯಾರ ಗಮನಕ್ಕೂ ಬಾರದಾಗಿರುತ್ತದೆ. ಆದಾಗ್ಯೂ ಪ್ರತಿ ಕಾರ್ಯವೂ ಭೂಮಿಯ ಮೇಲೆ ಆತನ ಕಾರ್ಯದ ಬಿಡುಗಡೆಯಾಗಿದೆ.

ಈ ಪುಸ್ತಕವು ಭೂಮಿಯ ಮೇಲೆ ದೇವರ ಉದ್ಧೇಶಗಳಿಗೆ ಜನ್ಮ ನೀಡುವ ಪರಿಜ್ಞಾನವನ್ನು ಅಥವಾ ಒಳನೋಟವನ್ನು ಒಳಗೊಂಡಿದೆ. ಆದುದರಿಂದ ನಿಮ್ಮ ಜೀವಿತದ ಮೂಲಕ ದೇವರ ಕಾರ್ಯಗಳನ್ನು ಬಿಡುಗಡೆಗೊಳಿಸಿರಿ.!

**ದೇವರ ಉದ್ಧೇಶಗಳು ನಮ್ಮ ಮೂಲಕ**
**ಭೂಮಿಯ ಮೇಲೆ ಬಿಡುಗಡೆಗೊಂಡಿವೆ.**

# 2
# 'ಮರಿಯಳ ಅದ್ಭುತ'ದಿಂದ ಪಾಠಗಳು

**''ಆದರಿಂದ ಕರ್ತನು ತಾನೇ ನಿಮಗೆ ಒಂದು ಗುರುತನ್ನು ಕೊಡುವನು ಇಗೋ ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು''** (ಯೆಶಾಯ 7:14)

ನೀವು 'ಮರಿಯಳ ಅದ್ಭುತ' ವನ್ನು ನೋಡುವಾಗ ಭೂಮಿಯ ಮೇಲೆ ದೇವರ ಕಾರ್ಯಗಳ ಒಳನೋಟವನ್ನು ಕೆಳಕಂಡಂತಿದೆ.

## ನೇಮಿಸಲ್ಪಟ್ಟ ಸಮಯದಲ್ಲಿ ಭೂಮಿಯೊಳಗೆ ಬಿಡುಗಡೆಗೊಳ್ಳುವುದು

ದೇವಕುಮಾರನ ಜನನವು ಏದೇನ್ ತೋಟದಲ್ಲಿ ಪ್ರಕಟಿಸಲ್ಪಟ್ಟಿತ್ತು. ''ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅವರ ಹಿಮ್ಮಡಿಯನ್ನು ಕಚ್ಚುವಿ'' (ಆದಿಕಾಂಡ 3:15). ಪ್ರವಾದಿ ಯೆಶಾಯ ಮತ್ತು ಬೇರೆ ಪ್ರವಾದಿಗಳು ಸಹ ಆತನ ಬರೋಣದ ಬಗ್ಗೆ ಪ್ರವಾದಿಸಿದ್ದರು. ಆದಾಗ್ಯೂ ದೇವರು ಬೇಗನೆ ರಕ್ಷಕನನ್ನು ಪ್ರಪಂಚಕ್ಕೆ ಕಳುಹಿಸುವ ತವಕದಲ್ಲಿರಲಿಲ್ಲ. ಪ್ರವಾದಿಸಿದ 4000 ವರ್ಷಗಳ ಬಳಿಕ, ''ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು'' (ಗಲಾತ್ಯ 4:4). ದೇವರು ಯಾವಾಗಲೂ ತನ್ನ ಕಾರ್ಯಗಳನ್ನು ನೇಮಿಸಲ್ಪಟ್ಟ ಸಮಯದಲ್ಲಿ ಬಿಡುಗಡೆಗೊಳಿಸುತ್ತಾನೆ.

ನಿಮ್ಮ ಮೂಲಕ ದೇವರು ಬಿಡುಗಡೆ ಮಾಡಬೇಕೆಂದಿರುವ ಎಲ್ಲಾ ಕಾರ್ಯಗಳನ್ನು ನೇಮಿಸಲ್ಪಟ್ಟ ಸಮಯದಲ್ಲಿ ಬಿಡುಗಡೆ ಮಾಡುತ್ತಾನೆ.

## ಸಾಮಾನ್ಯ ಜನರ ಮೂಲಕ ಬಿಡುಗಡೆಗೊಳ್ಳುವುದು

ದೇವರು ತನ್ನ ಮಗನನ್ನು ಭೂಲೋಕಕ್ಕೆ ಕಳುಹಿಸಬೇಕೆಂದು ತೀರ್ಮಾನಿಸಿದಾಗ ಕನ್ಯೆ ಮರಿಯಳೆಂಬ ಯೆಹೂದಿ ಯುವತಿಯನ್ನು ಆರಿಸಿಕೊಂಡನು. ದೇವರು ತನ್ನ ಮಗನನ್ನು

ಭೂಲೋಕಕ್ಕೆ ಕಳುಹಿಸುವ ಅತ್ಯಂತ ಮಹತ್ವಪೂರ್ಣ ಕಾರ್ಯದಲ್ಲಿ ಕನ್ಯೆಯನ್ನು ಆರಿಸಿ ನೇಮಿಸಿದ್ದು ಬಹಳ ಗಂಭೀರವೆಂದು ಪರಿಗಣಿಸಬಹುದು. ಎಂತಹ ಗಂಡಾಂತರದ ಕಾರ್ಯವನ್ನು ದೇವರು ತೆಗೆದುಕೊಂಡನು! ಮರಿಯಳ ಗರ್ಭದಲ್ಲಿದ್ದ ಮಗುವಿಗೆ ಏನಾದರೂ ಅನಾಹುತವಾಗಿದ್ದರೆ? ಮರಿಯಳೇನಾದರೂ ಗರ್ಭಪಾತ ಮಾಡಿಸಲು ಒತ್ತಾಯಿಸಿಲ್ಪಟ್ಟಿದ್ದರೆ? ಮರಿಯಳಿಗೆ ಗರ್ಭಪಾತವಾಗಿದ್ದರೆ? ಅಥವಾ ಈ ಘಟನೆ ನಡೆದ ಸಮಯದ ಇತಿಹಾಸ ಗಮನಿಸುವುದಾದರೆ ಇಂತಹ ಅಗೌರವದ ಕೃತ್ಯ ಕಂಡು ಕಲ್ಲೆಸೆದು ಮರಿಯಳು ಕೊಲ್ಲಲ್ಪಟ್ಟಿದ್ದರೆ? ಪ್ರಪಂಚದ ರಕ್ಷಕನಿಗೆ ಏನಾಗುತಿತ್ತು? ಮಾನವ ಕುಲಕ್ಕೆ ಏನಾಗಿರುತ್ತಿತ್ತು? ಆದಾಗ್ಯೂ ಇಂತಹ ಎಲ್ಲಾ ಸಮಸ್ಯೆಗಳ ಮಧ್ಯದಲ್ಲಿ ಕನ್ಯೆ ಮರಿಯಳಲ್ಲಿ ತನ್ನ ಕಾರ್ಯ ನೆರವೇರಿಸಲು ದೇವರು ಸಿದ್ಧನಾದನು. ದೇವರು ಇಂತಹ ಕಾರ್ಯವನ್ನು ಮಾಡುವುದಾದರೆ, ಇನ್ನುಳಿದ ಕಾರ್ಯಗಳನ್ನು ಸುಲಭವಾಗಿ ಮನುಷ್ಯರ ಮೂಲಕ ಮಾಡಬಹುದು. ಅಂದರೆ ಮಹಾಸಮೂಹಕ್ಕೆ ಸುವಾರ್ತೆ ಮುಟ್ಟುವುದು, ರೋಗಿಯ ಸ್ವಸ್ಥತೆ, ಬಂಧನದಲ್ಲಿರುವವರ ಬಿಡುಗಡೆ, ದೇಶಗಳ ಸ್ವಸ್ಥತೆ ಮತ್ತು ಎಲ್ಲದಕ್ಕಿಂತ ಮಿಗಿಲಾಗಿ ನನ್ನ ಮತ್ತು ನಿಮ್ಮಂತಹ ಜನರ ಮಧ್ಯದಲ್ಲಿನ ಕಾರ್ಯಗಳು. ಸಾಮಾನ್ಯ ಜನರಿಗೆ ಇಂತಹ ಕಾರ್ಯಗಳನ್ನು ದೇವರು ಒಪ್ಪಿಸಿಕೊಡುವುದರಲ್ಲಿ ಭಯಪಡುವುದಿಲ್ಲ. ಬದಲಾಗಿ ದೇವರು ತನ್ನ ಕಾರ್ಯಗಳನ್ನು ಭೂಮಿಯ ಮೇಲೆ ಬಿಡುಗಡೆಗೊಳಿಸಲು ಸಾಮಾನ್ಯ ಜನರನ್ನು ಆರಿಸಿಕೊಂಡಿದ್ದಾನೆ.

## ಅಚ್ಚ-ಹಸನಾದದು - ಆತನ ಆತ್ಮದಲ್ಲಿ ಪವಿತ್ರವಾಗಿ ಜನಿಸಿದ್ದು

ಮರಿಯಳ ಗರ್ಭದಲ್ಲಿನ ದೇವಕುಮಾರನು ಗರ್ಭಧರಿಸಲ್ಪಟ್ಟಿದ್ದು ಒಂದು ಅಲೌಕಿಕ ಕಾರ್ಯ. ಇದು ಪವಿತ್ರಾತ್ಮನ ಪವಿತ್ರ ಕಾರ್ಯ, ಗರ್ಭಧಾರಣೆಯು ಮಾನವ ಗರ್ಭದಲ್ಲಿ ಕಾರ್ಯಗತವಾದರೂ ಇದು ಅದ್ಭುತದ ಮೂಲಕ ನಡೆಯಿತು. ಈ ಗರ್ಭಧಾರಣೆಯ ಕಾರ್ಯದಲ್ಲಿ ಯಾವುದೇ ಮನುಷ್ಯನ ಮೂಲಧಾತು ಒಳಗೊಂಡಿಲ್ಲ - ದೇವಧೂತನು ಮರಿಯಳಿಗೆ "ನಿನ್ನ ಮೇಲೆ ಪವಿತ್ರಾತ್ಮ ಬರುವುದು ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವದು ಆದುದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವುದು" ಎಂದು ಹೇಳಿದನು (ಲೂಕ 1:35). ನಮ್ಮ ಮೂಲಕ ದೇವರು ಬಿಡುಗಡೆ ಮಾಡುವ ಎಲ್ಲಾ ಕಾರ್ಯಗಳು ಆತನ ಆತ್ಮನಿಂದ ಜನಿಸಿದವುಗಳಾಗಬೇಕು. ಈ ಕಾರ್ಯಗಳು ನಮ್ಮ ಪ್ರಾಕೃತಿಕ ಗುಣ ಮತ್ತು ಸಾಮರ್ಥ್ಯಕ್ಕೆ ತಕ್ಕಂತೆ ಬಿಡುಗಡೆಯಾದ್ಯಾಗ್ಯೂ, ಇದು ಆತ್ಮನಿಂದ ಗರ್ಭ ತಾಳುವುದಾಗಿದೆ. ಯಾವುದು

ಶರೀರದಿಂದ ಗರ್ಭತಾಳುತ್ತದೋ ಅದು ಶರೀರಕ್ಕೆ ಸಂಬಂಧಪಟ್ಟಿದ್ದು. ಆತ್ಮನಿಂದ ಗರ್ಭತಾಳಿದ್ದು ಆತ್ಮಕ್ಕೆ ಸಂಬಂಧ ಪಟ್ಟಿದ್ದು. ಮಾನವನು ತನ್ನ ವಿವೇಚನ ಶಕ್ತಿ, ಆಲೋಚನೆ ಮತ್ತು ನವೀನತೆಯ ನಿಮಿತ್ತ ತನ್ನ ಕಾರ್ಯಗಳನ್ನು ಮಾಡಿ ಇದು ದೇವರ ಯಥಾರ್ಥ ಕಾರ್ಯವೆಂದು ಹೇಳಲು ಆಗದು. ಇದು ಆತ್ಮಿಕವಾಗಿ ಯಾವ ರೀತಿ ಕಂಡು ಬಂದರೂ ಅನ್ನುವುದಕ್ಕಾಗದು. ಕೆಲಸವು ಆತ್ಮನಿಂದ ಜನಿಸಲ್ಪಟ್ಟಿಲ್ಲದಿದ್ದರೆ ಅದು ಶಾರೀರಿಕ ಅನಪೇಕ್ಷ ಅಥವಾ ಗಣನೆಗೆ ಬಾರದ ಧಾರ್ಮಿಕ ಕೆಲಸವಾಗಿ ತೋರುತ್ತದೆ. ದೇವರು ಅಂತಹ ಶಾರೀರಿಕ ಕೆಲಸಗಳನ್ನು ಅಭಿಷೇಕಿಸುವುದಿಲ್ಲ. (ವಿಮೋಚನಕಾಂಡ 30:32)

## ತೊಡಕು ಉಂಟುಮಾಡುವ ಕಾರಣವಾಗಬಹುದು

ಲೋಕದ_ರಕ್ಷಕನಾದ ಯೇಸುವು ಮಾನವ ಸಾಧನವಾದ ಮರಿಯಳ ಮೂಲಕ ಜನಿಸುವುದು ಆಕೆಗೆ ಎಂತಹ ಗೌರವದ ಕಾರ್ಯವಾಗಿದೆ. ಆದರೂ ಎಂತಹ ತೊಡಕಿನ ಸ್ಥಿತಿಯನ್ನು ಆಕೆ ಎದುರಿಸಬೇಕಾಯಿತು. ಇಲ್ಲಿ ಮದುವೆಯಾಗದ ಯುವತಿ ಕನ್ಯೆ ಗರ್ಭಧರಿಸಿದಳು. ಹೌದು, ಆಕೆಯು ಸ್ವತಃ ದೇವರ ಮಗನನ್ನು ಗರ್ಭಧರಿಸಿದ್ದಳು ಆದರೆ ಆಕೆಯು ಕುಟುಂಬದವರು, ಸ್ನೇಹಿತರು ಈಕೆ ಕೊಟ್ಟಂತಹ ವಿವರಣೆಯನ್ನು ಅಂಗೀಕರಿಸುವರೋ? ಆಕೆಯು ಪವಿತ್ರಾತ್ಮನಿಂದ ಗರ್ಭ ಧರಿಸಿದರ ಕುರಿತು ವಿವರಣೆ ನೀಡಿದಾಗ ಅವರು ನಂಬುವರೊ? ದೇವರು ತನ್ನ ಮಗನನ್ನು ಮರಿಯಳ ಮೂಲಕ ಜನಿಸುವಂತೆ ಮಾಡುವ ಕಾರ್ಯದಲ್ಲಿ ಆಕೆಯನ್ನು ಇಂತಹ ತೊಡಕಿನ ಪರಿಸ್ಥಿತಿಗೆ ಸಿಲುಕುವಂತೆ ದೇವರು ಮಾಡಿದ್ದೇಕೆ?

ಇದರ ಕುರಿತು ನಮಗೆ ಒಂದು ಪಾಠವಿದೆ. ನಾವು ದೇವರು ಕೊಡಲ್ಪಟ್ಟ ಅಥವಾ ನೇಮಿಸಲ್ಪಟ್ಟ ಕಾರ್ಯದಲ್ಲಿ ಮುಂದುವರೆಯುವಾಗ ಅದು ನಮಗೆ ತೊಡಕುಂಟಾಗಲು ಕಾರಣವಾಗಬಹುದು. ದೇವರು ನಮ್ಮಲ್ಲಿ ಮತ್ತು ನಮ್ಮ ಮೂಲಕ ಮಾಡುವ ಎಲ್ಲಾ ಕಾರ್ಯಗಳನ್ನು ಎಲ್ಲರೂ ಅರ್ಥ ಮಾಡಿಕೊಳ್ಳುವುದಿಲ್ಲ. ಆತನ ಕಾರ್ಯಗಳನ್ನು ಮಾಡುವುದರಿಂದ ನಿಂದನೆಗೆ ಒಳಗಾಗಿ ತಳ್ಳಲ್ಪಡಬಹುದು. ಆಗಾಗ್ಗೆ ಇಂತಹ ಸಂದಿಗ್ಧ ಪರಿಸ್ಥಿತಿ ಎದುರಾಗುವಂತೆ ದೇವರು ಮಾಡುತ್ತಾನೆ. ಆದ್ದರಿಂದ ಇಂತಹ 'ಶರೀರ' ಸಾಯಲ್ಪಡುತ್ತದೆ. ಅಲ್ಲದೆ ನಾವು ತಗ್ಗಿಸಲ್ಪಟ್ಟು ದೇವಕುಮಾರನು ಹೆಚ್ಚಿಸಲ್ಪಡುತ್ತಾನೆ. ಕರ್ತನಾದ ಯೇಸು ಕ್ರಿಸ್ತನು ನಮ್ಮ ಮೂಲಕ ಮಾಡುವಂತಹ ಕಾರ್ಯಗಳಲ್ಲಿ ಸಾಕ್ಷಿಕೊಡುವುದರಲ್ಲಿ ನಾಚಿಕೆಗೊಳ್ಳಬಾರದೆಂದು ನಾವು ಕಲಿಯುತ್ತೇವೆ.

ದೇವರು ಅಲೌಕಿಕ ಕಾರ್ಯಗಳನ್ನು ಬಿಡುಗಡೆ ಮಾಡುವಾಗ ಅವು ಸಾಮಾನ್ಯವಾಗಿ, ಸಹಜ ಕಾರ್ಯಗತಿಯವಾಗಿರುತ್ತವೆ. ಮರಿಯಳ ಗರ್ಭದಲ್ಲಿ ಮಗುವು ಅಲೌಕಿಕ ಅಥವಾ ಅತ್ಯದ್ಭುತ ಕಾರ್ಯದಿಂದ ಉಂಟಾದುದಾದರೂ, ಆಕೆಯು ಆ ಮಗುವನ್ನು ಕೊನೆಯವರೆಗೂ ಹೊರಬೇಕಾಯಿತು. ಯಾಕೆ ದೇವರು ಪೂರ್ಣ ಕಾರ್ಯಗತಿಯನ್ನು ಗರ್ಭದಾರಣೆ, ಗರ್ಭವತಿಯಾಗಿರುವ ಕಾಲಾವಧಿ ಮತ್ತು ಹೆರಿಗೆಗಳನ್ನು ಅದ್ಭುತಕರವಾಗಿ ಮಾಡಲಿಲ್ಲ? ಮೊದಲ ದಿನದಲ್ಲಿ ಮಗುವು ಗರ್ಭಧರಿಸಿ ಮೂರನೆಯ ದಿನದಲ್ಲಿ ಹೆರಿಗೆಯಾಗಿದ್ದರೆ ಅದು ಒಂದು ಮಹಾ ಅದ್ಭುತವಾಗಿರುತ್ತಿತ್ತು? ಯಾಕೆ ಮರಿಯಳು ಸಾಮಾನ್ಯ ಪ್ರಾಕೃತಿಕ ವಿಧಾನದಂತೆ ಕೊನೆಯ ಗಳಿಗೆವರೆಗೆ ಹೊರಬೇಕಾಯಿತು? ಇಲ್ಲಿರುವಂತಹ ಪ್ರಾಮುಖ್ಯ ಅಂಶವೇನೆಂದರೆ ದೇವರ ಅಲೌಕಿಕ ಕಾರ್ಯಗಳು ಭೂಮಿಯ ಮೇಲೆ ಸಾಮಾನ್ಯ ಪ್ರಾಕೃತಿಕ ಕಾರ್ಯಗತಿಯಿಂದ ಜರುಗುತ್ತವೆ. ಉದಾಹರಣೆಗೆ, ದೇವರು ನಿನ್ನನ್ನು ಒಂದು ಬಲಿಷ್ಠ ಸ್ಥಳೀಯ ಸಭೆ ಎಬ್ಬಿಸಲು ಕರೆದಿರಬಹುದು. ಇದು ದೇವರ ನಿನ್ನ ಮೂಲಕ ಬಿಡುಗಡೆ ಮಾಡುವ ಕಾರ್ಯವಾಗಿದೆ ಈ ಕ್ಷೇತ್ರದಲ್ಲಿ ದೇವರು ನಿನ್ನನ್ನು ಖಂಡಿತವಾಗಿ ಅಭಿಷೇಕಿಸಿ ವರಗಳಿಂದ ತುಂಬಿಸುತ್ತಾನೆ. ಆದಾಗ್ಯೂ ನೀನು ಸಾಮಾನ್ಯ ಪ್ರಾಕೃತಿಕ ಕಾರ್ಯಗತಿ ವಿಧಾನಗಳಾದ ಪರಿಶ್ರಮದಿಂದ ಕೆಲಸ ಮಾಡುವುದು, ಬೋಧಿಸುವುದು, ಪ್ರಸಂಗಮಾಡುವುದು, ಕಾಳಜಿವಹಿಸುವುದು, ಸ್ಥಳೀಯ ಸಭೆ ಸ್ಥಾಪನೆಯಲ್ಲಿ ಯೋಜನೆಯನ್ನು ಮಾಡಿ ಕ್ರಮಗೊಳಿಸುವುದು. ಮುಂತಾದ ನಿನ್ನ ಸಾಮಾನ್ಯ ಪ್ರಾಕೃತಿಕ ಪ್ರವೃತ್ತಿಯಿಂದ ದೇವರು ಅಲೌಕಿಕ ಕಾರ್ಯಗಳನ್ನು ನಿನ್ನ ಮೂಲಕ ಬಿಡುಗಡೆಮಾಡುತ್ತಾನೆ.

ಮತ್ತೊಂದು ಉದಾಹರಣೆಯು ದೈವಿಕ ಒದಗಿಸುವಿಕೆಯ ಕ್ಷೇತ್ರದ್ದಾಗಿದೆ. ದೇವರ ಮಕ್ಕಳಾಗಿ, ದೇವರು ನಮ್ಮ ಎಲ್ಲಾ ಕೊರತೆಗಳನ್ನು ನೀಗಿಸುತ್ತಾನೆ ಎಂದು ನಂಬುತ್ತೇವೆ. ನಾವು ದೇವರ ಅಲೌಕಿಕ (ಅತ್ಯದ್ಭುತ) ಒದಗಿಸುವಿಕೆಯನ್ನು ನಂಬುತ್ತೇವೆ. ಆದರೆ ನಾವು ನಮ್ಮ ಸ್ವಂತ ಕೈ ಕೆಲಸದಿಂದ ದೇವರ ಅಲೌಕಿಕ ಒದಗಿಸುವಿಕೆ ಸಿಗುತ್ತದೆ ಎಂಬುದನ್ನು ಅನೇಕ ಬಾರಿ ನಾವು ಗ್ರಹಿಸುವುದಿಲ್ಲ. ನಾವು ಕೆಲಸ ಮಾಡಲೇ ಬೇಕು ಆದರೆ ದೊರಕುವ ಒದಗಿಸುವಿಕೆಯು ದೈವಿಕ ಅಥವಾ ಅಲೌಕಿಕವಾದದ್ದು. ನಿನಗೆ ಕೆಲಸವಿರುವುದು ಅದ್ಭುತವೇ ಸರಿ, ಆದರೆ ನಿನ್ನ ಕೆಲಸದ ಮೂಲಕ ಪಡೆಯುವ ಒದಗಿಸುವಿಕೆಯು ಅಧಿಕವಾಗಿ ದೇವರದೇ ಅಥವಾ ಅಲೌಕಿಕವಾದುದೆ.

## ಮುಚ್ಚಲ್ಪಟ್ಟ ಬಾಗಿಲುಗಳನ್ನು ಸಂಧಿಸುವುದು

ಸತ್ಯವೇದವು ಹೀಗೆ ಹೇಳುತ್ತದೆ. '' ಆಕೆಯು ತನ್ನ ಚೊಚ್ಚಲು ಮಗನನ್ನು ಹೆತ್ತು ಬಟ್ಟೆಯಲ್ಲಿ ಸುತ್ತಿ ಛತ್ರದಲ್ಲಿ ಅವರಿಗೆ ಸ್ಥಳವಿಲ್ಲದ ಕಾರಣ ಅವನನ್ನು ಗೋದಲಿಯಲ್ಲಿ ಮಲಗಿಸಿದಳು'' (ಲೂಕ 2:7)

ಬೆತ್ಲಹೇಮಿನಲ್ಲಿ ಎಷ್ಟು ಛತ್ರಗಳಿದ್ದವೆಂಬುದಕ್ಕೆ ನಮ್ಮಲ್ಲಿ ಪುರಾವೆಗಳಿಲ್ಲ. ನಮ್ಮ ಮನಸ್ಸಿನಲ್ಲಿ ಊಹಿಸಿಕೊಳ್ಳುವುದೇನೆಂದರೆ ಯೋಸೇಫನು ಮತ್ತು ಮರಿಯಳು ಅನೇಕ ಛತ್ರಗಳ ಬಳಿನಿಂತರು, ತಮಗೆ ಕೊಠಡಿಯನ್ನು ಪಡೆಯಲು ಸಾಧ್ಯವಾಗಲಿಲ್ಲ. ಅವರು ಹೋದ ಛತ್ರದಲ್ಲಿ ಕೊಡಲು ಕೊಠಡಿಗಳಿರಲಿಲ್ಲವೇನೋ ಆದುದರಿಂದ ಛತ್ರದ ಯಜಮಾನನು ಅವರನ್ನು ಗೋದಲಿ ಕಡೆಗೆ ನಡೆಸಿದನು. ಈ ಲೋಕದ ಸೃಷ್ಠಿಕರ್ತನಾದ ದೇವರು ಅತ್ಯದ್ಭುತವಾಗಿ ತನ್ನ ಮಗನ ಜನನಕ್ಕಾಗಿ ಒಂದು ಕೊಠಡಿಯನ್ನು ಮೀಸಲಿಡಲಾಗದೇ ಹೋದನೋ? ಮರಿಯಳ ಮನಸ್ಸಿನಲ್ಲಿ ಉಂಟಾದ ಯೋಚನೆಗಳನ್ನು ಗ್ರಹಿಸಿಕೊಳ್ಳಿ? ಆಕೆಯು ಈ ರೀತಿ ಯೋಚಿಸಿದ್ದಿರಬಹುದು ''ದೇವರು ಖಂಡಿತವಾಗಿ ನಮಗೆ ಕೊಠಡಿ ಸಿದ್ದಮಾಡಿದ್ದಾನೆ ನಾನು ಗರ್ಭಧರಿಸಿರುವ ಮಗು ದೇವರ ಮಗನು, ನಿಶ್ಚಯವಾಗಿ ನಮಗೆ ಛತ್ರದಲ್ಲಿ ಕೊಠಡಿಯಿರುತ್ತದೆ ''ಆದಾಗ್ಯೂ ನಿರುತ್ಸಾಹಪಡಿಸಿದ ಸಂಗತಿಯೆಂದರೆ ತಟ್ಟಿದಂತಹ ಎಲ್ಲಾ ಬಾಗಿಲುಗಳು ಮುಚ್ಚಿದಂತೆ ತೋರಿಬಂದವು. ಕೊನೆಯದಾಗಿ ದೇವರು ತನ್ನ ಮಗನು ಯಾವ ಸ್ಥಳದಲ್ಲಿ ಜನಿಸಬೇಕೆಂದು ಯೋಚಿಸಿದ್ದನೊ ಆ ಜಾಗವನ್ನು ಮುಟ್ಟಿದರು. ಆದುದರಿಂದ ನಮ್ಮ ಜೀವಿತಗಳಲ್ಲೂ ಭೂಮಿಯ ಮೇಲೆ ದೇವರ ಕಾರ್ಯಗಳಿಗೆ ಜನನ ನೀಡುವಾಗ, ಅನೇಕ ಬಾರಿ ಮುಚ್ಚಲ್ಪಟ್ಟ ಬಾಗಿಲುಗಳನ್ನು ನೋಡುತ್ತೇವೆ. ನಾವು ಹೊತ್ತು ನೆಡೆಸುವ ಕಾರ್ಯ ಯಾಥಾರ್ಥವಾದುದಲ್ಲವೆಂಬುದು ಇದರ ಅರ್ಥವಲ್ಲ. ಮುಚ್ಚಲ್ಪಟ್ಟ ಬಾಗಿಲುಗಳ ಸಾಮಾನ್ಯ ಅರ್ಥವೇನೆಂದರೆ, ನಾವು ಮುಂದುವರೆಯುತ್ತಿರಲೇಬೇಕು, ಬೇರೆ ಬಾಗಿಲುಗಳನ್ನು ತಟ್ಟುತ್ತಲೇ ಇರಬೇಕು, ದೇವರು ತನ್ನ ಕಾರ್ಯವನ್ನು ಬಿಡುಗಡೆ ಮಾಡುವ ಸ್ಥಳ ದೊರೆಯುವವರೆಗೂ ಮುಂದುವರೆಯುತ್ತಿರಲೇಬೇಕು.

ಅನೇಕರಲ್ಲಿ ಯಥಾರ್ಥಕಾರ್ಯಗಳಿರುವುದನ್ನು ನೋಡುತ್ತೇವೆ ಅವು ದೇವರಿಂದ ಅವರ ಆತ್ಮದಲ್ಲಿ ಗರ್ಭಧರಿಸಿವೆ. ಅಂದರೆ ಅವು ಸತ್ಯವಾಗಿ ಪವಿತ್ರಾತ್ಮನ ಕಾರ್ಯಗಳೇ ಹೇಗಾದರೂ ಅವು ಬಿಡುಗಡೆಯಾಗವು - ಜನನ ಹೊಂದವು ದೇವರು ಅವುಗಳನ್ನು

ಯಾವ ಸ್ಥಳದಲ್ಲಿ ಜರುಗಬೇಕೆಂಬುದನ್ನು ತಿಳಿಸುವವರೆಗೂ ಅವುಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕೊಠಡಿಗಳಿಲ್ಲದೇ ಮುಂದುವರೆಯಬಹುದು. ದೇವರು ನಿಗದಿ ಮಾಡಿದ ಸ್ಥಳದಲ್ಲಿ ಬಿಡುಗಡೆ ಮಾಡುವವರೆಗೂ ಹೋಗಲೇಬೇಕು. ನಮ್ಮ ಮೂಲಕ ದೇವರ ಉದ್ದೇಶಗಳಿಗೆ ಜನ್ಮ ನೀಡಬೇಕಾದರೆ ನಾವು ಸರಿಯಾದ ಸ್ಥಳದಲ್ಲಿರಬೇಕು.

## ಕಾಪಾಡುವುದು ಮತ್ತು ಪಾಲನೆ ಮಾಡುವುದು

ಯೇಸು ಬಾಲಕರಂತೆ ಅಂದರೆ ಬೇರೆ ಮಕ್ಕಳು ಬೆಳೆದು ಬಲಗೊಳ್ಳುವಂತೆ, ಬೆಳೆದು ಬಲಗೊಂಡು ಜ್ಞಾನದಿಂದ ತುಂಬಿದವನಾದನು (ಲೂಕ 2:40). ಯೇಸು ಜನಿಸಿದಾಗಲೇ ತಾನೇ ಆಹಾರ ಸೇವಿಸಲಿಲ್ಲ, ಬಟ್ಟೆ ಹೊದ್ದುಕೊಳ್ಳಲಿಲ್ಲ ಬದಲಾಗಿ ತಾಯಿ ಮರಿಯಳು ಬೇರೆ ತಾಯಂದಿರ ರೀತಿ ಮಗುವಿಗೆ ಕಾಳಜಿ ವಹಿಸಿ ಪಾಲನೆಮಾಡಿ ಬೆಳೆದು ಬಲಗೊಳ್ಳುವಂತೆ ಮಾಡಿದಳು. ಯೇಸು ಮಗುವಾಗಿದ್ದಾಗ ಯೋಸೇಫನು ಮತ್ತು ಮರಿಯಳು ಮಗುವನ್ನು ರಕ್ಷಿಸಲು ಬೆತ್ಲಹೇಮಿನಿಂದ ಐಗುಪ್ತದೇಶಕ್ಕೆ ಹೋಗಬೇಕಾಯಿತು ಯಾಕೆಂದರೆ ಹೆರೋದನು ಈ ಕೂಸನ್ನು ಕೊಲ್ಲ ಬೇಕೆಂದಿದ್ದನು. (ಮತ್ತಾಯ 2:12-16). ಮರಿಯಳು ಮತ್ತು ಯೋಸೇಫನು ಕೂಸು ಸ್ವತಹ ಯೋಚಿಸಲು ಬಿಡಲಿಲ್ಲ, ಇದು ದೇವರ ಕೂಸು ನಿಶ್ಚಯವಾಗಿ ಈತನೇ ಪೋಷಿಸಿಕೊಳ್ಳುತ್ತಾನೆ, ಕಾಪಾಡಿಕೊಳ್ಳುತ್ತಾನೆ ತಾನೇ ಪಾಲನೆ ಮಾಡಿಕೊಳ್ಳುತ್ತಾನೆ ಎಂಬುದಾಗಿ ಯೋಚಿಸಲಿಲ್ಲ. ಮರಿಯಳಿಗೆ ದೇವರ ಮಗುವಿಗೆ ಜನನ ಕೊಡುವ ಜವಬ್ಧಾರಿ ಮಾತ್ರವಲ್ಲದೆ ಪಾಲನೆಮಾಡುವ, ಕಾಳಜಿವಹಿಸುವ, ಆತನನ್ನು ಕಾಪಾಡುವ ಜವಾಬ್ಧಾರಿಯಿತ್ತು. ಅದೇ ರೀತಿಯಾಗಿ ನಮ್ಮಲ್ಲಿ ಜನಿಸುವ ದೇವರ ಕಾರ್ಯಗಳಿಗೆ ನಾವು ಮನೆವಾರ್ತೆಯವರಾಗಿದ್ದೇವೆ. ನಮ್ಮಲ್ಲಿ ಉದ್ಭವಿಸುವ ಎಲ್ಲಾ ಕಾರ್ಯಗಳನ್ನು ಪಾಲನೆ ಮಾಡಬೇಕು ಕಾಳಜಿ ವಹಿಸಬೇಕು, ಮತ್ತು ಕಾಪಾಡಬೇಕು. ತನಗೆ ಜನಿಸಿದ ಮಗುವಿನ ಜವಬ್ದಾರಿ ಹೊತ್ತ ತಾಯಿಯಂತೆ - ಉಣಿಸುವುದರಲ್ಲಿ ಪಾಲನೆ ಮಾಡುವದುದರಲ್ಲಿ ಕಾಳಜಿ ವಹಿಸುವುದರಲ್ಲಿ ಮತ್ತು ಮಗುವನ್ನು ಕಾಪಾಡುವುದರಲ್ಲಿ ನಾವು ಸಹ ದೇವರು ನಮ್ಮಲ್ಲಿ ಜನಿಸಿದ ಕಾರ್ಯಗಳ ಬಗ್ಗೆಯೂ ಕಾಳಜಿವಹಿಸಬೇಕು ಉಣಿಸಬಡಿಸಬೇಕು, ಮತ್ತು ಕಾಪಾಡಬೇಕು. ನಮ್ಮಿಂದ ಬಿಡುಗಡೆಗೊಂಡ ದೇವರ ಕೆಲಸಗಳನ್ನು ದುರಾತ್ಮನಾಗಲಿ, ದುಷ್ಟಪ್ರೇರಣೆಗೆ ಒಳಗಾದ ಜನರಾಗಲಿ ಹಾಳು ಮಾಡದಂತೆ ಕಾಪಾಡಿಕೊಳ್ಳಬೇಕು.

ಮುಂದಿನ ಅಧ್ಯಾಯಗಳಲ್ಲಿ ದೇವರ ಉದ್ದೇಶಗಳಿಗ ಜನನ ನೀಡುವ ವಿಧಾನದಲ್ಲಿ ಅಡಕವಾಗಿರುವ ನಾಲ್ಕು ಮೂಲವಸ್ತುಗಳನ್ನು ವಿಚಾರ ಮಾಡುತ್ತೇವೆ.

**ದೇವರ ಕೆಲಸ**

- ನಿಗದಿತ ಸಮಯದಲ್ಲಿ ಭೂಮಿಯ ಮೇಲೆ ಬಿಡುಗಡೆ ಮಾಡುತ್ತಾನೆ.
- ಸಾಮಾನ್ಯ ಜನರ ಮೂಲಕ ಬಿಡುಗಡೆ ಮಾಡುತ್ತಾನೆ
- ಹಸನಾದುದು - ಆತ್ಮನಿಂದ ಪವಿತ್ರನಾಗಿ ಜನಿಸಿದ್ದುದ್ದಾಗಿರುತ್ತದೆ.
- ತೊಡಕು ಉಂಟುಮಾಡಲು ಕಾರಣವಾಗಬಹುದು
- ಮುಚ್ಚಲ್ಪಟ್ಟ ಬಾಗಿಲುಗಳನ್ನು ಸಂಧಿಸಬಹುದು
- ಕಾಪಾಡಲ್ಪಡಬೇಕು ಮತ್ತು ಪಾಲನೆಮಾಡಬೇಕು.

# 3

# ನಿನ್ನಲ್ಲಿ ಇರುವ ಠೇವಣಿ (ಭದ್ರತೆಗಾಗಿ ನಿನ್ನಲ್ಲಿಟ್ಟ ವಸ್ತು)

ದೇವರು ತನ್ನ ಉದ್ಧೇಶಗಳನ್ನು ನಮ್ಮಲ್ಲಿ ಇರುವ ಠೇವಣಿಯ ಮೂಲಕ ಬಿಡುಗಡೆಗೊಳಿಸುತ್ತಾನೆ.

## ನಮ್ಮಲ್ಲಿರುವ ಠೇವಣಿಯು ನಮ್ಮ ಮೂಲಕ ಜನಿಸುವುದನ್ನು ನಿಶ್ಚಯಿಸುತ್ತದೆ. ಅಥವಾ ಇತ್ಯರ್ಥ ಮಾಡುತ್ತದೆ.

**ಮರ ಒಳ್ಳೇದೆಂದರೆ ಅದರ ಫಲವೂ ಒಳ್ಳೇದನ್ನಿರಿ. ಮರ ಹುಳುಕು ಅಂದರೆ ಅದರ ಫಲವೂ ಹುಳುಕು ಅನ್ನಿರಿ ಫಲದಿಂದಲೇ ಮರದ ಗುಣವು ಗೊತ್ತಾಗುವದು. ಸರ್ಪಜಾತಿಯವರೇ ನೀವು ಕೆಟ್ಟವರಾಗಿರಲಾಗಿ ಒಳ್ಳೆಯ ಮಾತುಗಳನ್ನಾಡುವುದಕ್ಕೆ ನಿಮ್ಮಿಂದ ಹೇಗಾದೀತು? ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಹೊರಡುವದು. ಒಳ್ಳೆಯವನು ತನ್ನ ಒಳ್ಳೆಯ ಬೊಕ್ಕಸದೊಳಗಿನಿಂದ ಒಳ್ಳೆಯ ವಸ್ತುಗಳನ್ನು ತೆಗೆಯುತ್ತಾನೆ. ಕೆಟ್ಟವನು ಕೆಟ್ಟಬೊಕ್ಕಸದೊಳಗಿನಿಂದ ಕೆಟ್ಟ ವಸ್ತುಗಳನ್ನು ತೆಗೆಯುತ್ತಾನೆ. ಇದಲ್ಲದೆ ನಾನು ನಿಮಗೆ ಹೇಳುವುದನೇಂದರೆ ಮನುಷ್ಯರು ಸುಮ್ಮನೆ ಆಡುವ ಪ್ರತಿಯೊಂದು ಮಾತಿನ ವಿಚಾರವಾಗಿ ನ್ಯಾಯವಿಚಾರಣೆಯ ದಿನದಲ್ಲಿ ಉತ್ತರ ಕೊಡಬೇಕು. ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪು ಹೊಂದುವಿ: ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪು ಹೊಂದುವಿ ಅಂದನು** (ಮತ್ತಾಯ 12:33-37)

ಒಳ್ಳೆಯ ಮನುಷ್ಯನು ತನ್ನ ಬೊಕ್ಕಸದೊಳಗಿನಿಂದ ಒಳ್ಳೆಯ ವಸ್ತುಗಳನ್ನು ತೆಗೆಯುತ್ತಾನೆ. ನಮ್ಮಲ್ಲಿ ಉದ್ಭವವಾಗಿರುವುದು ಠೇವಣಿಯ ಮೇಲೆ ಆಧಾರಗೊಂಡಿದೆ ನಮ್ಮ ಹೃದಯದೊಳಗೆ ಒಳ್ಳೆಯ ಠೇವಣಿಯಿಟ್ಟಿದ್ದರೆ ಅದು ಒಳ್ಳೆಯ ವಿಷಯಗಳಿಗೆ ಜನನ ನೀಡುತ್ತದೆ. ಹೃದಯದೊಳಗೆ ಕೆಟ್ಟ ಠೇವಣಿಯಿಟ್ಟಿದ್ದರೆ ದುಷ್ಟ ಕಾರ್ಯಗಳ ಜನನವಾಗುತ್ತದೆ. ನಮ್ಮಲ್ಲಿರುವ ಠೇವಣಿಯು ನಮ್ಮ ಮೂಲಕ ಜನಿಸುವ ವಿಷಯದ ಗುಣಗಳನ್ನು ನಿಶ್ಚಯಿಸುತ್ತದೆ.

**''ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರ್ರಿ. ಅವರು ಕುರೀವೇಷ ಹಾಕಿಕೊಂಡು ನಿಮ್ಮ ಬಳಿಗೆ ಬರುತ್ತಾರೆ; ಆದರೆ ಒಳಗೆ ನೊಡಿದರೆ ಅವರು ಹಿಡುಕೊಂಡು ಹೋಗುವ ತೋಳಗಳೇ. ಅವರ ಫಲಗಳಿಂದ**

**ಅವರನ್ನು ತಿಳುಕೊಳ್ಳುವಿರಿ. ಮುಳ್ಳು ಗಿಡಗಳಲ್ಲಿ ದ್ರಾಕ್ಷೀ ಹಣ್ಣುಗಳನ್ನು ಮದ್ದು ಗುಣಿಕೇ ಗಿಡಗಳಲ್ಲಿ ಅಂಜೂರಗಳನ್ನು ಕೊಯ್ಯುವುದುಂಟೇ? ಹಾಗೆಯೇ ಒಳ್ಳೀ ಮರಗಳೆಲ್ಲಾ ಒಳ್ಳೀ ಫಲವನ್ನು ಕೊಡುವುವು. ಹುಳುಕು ಮರವು ಕೆಟ್ಟ ಫಲವನ್ನು ಕೊಡುವುದು. ಒಳ್ಳೀಯ ಮರವು ಕೆಟ್ಟ ಫಲವನ್ನು ಕೊಡಲಾರದು. ಹುಳುಕು ಮರವು ಒಳ್ಳೀ ಫಲಗಳನ್ನು ಕೊಡಲಾರದು. ಒಳ್ಳೀ ಫಲವನ್ನು ಕೊಡದ ಎಲ್ಲಾ ಮರಗಳನ್ನು ಕಡಿದು ಬೆಂಕಿಯಲ್ಲಿ ಹಾಕುತ್ತಾರೆ. ಹೀಗಿರಲಾಗಿ ಅದರ ಫಲಗಳಿಂದ ಅವರನ್ನು ತಿಳಿದುಕೊಳ್ಳುವಿರಿ.** (ಮತ್ತಾಯ 7:15-20)

ಇಲ್ಲಿ ಯೇಸುವು ಫರಿಸಾಯರೊಂದಿಗೆ ಸಂಭಾಷಣೆ ಮಾಡುವುದನ್ನು ನೋಡುತ್ತೇವೆ. ಒಳ್ಳೆಯ ಫಲಗಳಿದ್ದರೆ ಮರವು ಅನಿವಾರ್ಯವಾಗಿ ಒಳ್ಳೆಯ ಮರವಾಗುತ್ತದೆಂಬುದು ಫರಿಸಾಯರ ತಳಹದಿ. ಯೇಸುವು ಇದಕ್ಕೆ ವಿರುದ್ಧವಾದದ್ದು ಸತ್ಯ ಎಂಬುದಾಗಿ ಹೇಳಿದರು. ಅಂದರೆ ಮರವು ಒಳ್ಳೆಯದಾದರೆ ಮಾತ್ರ ಅದರ ಫಲದಿಂದ ಒಳ್ಳೆಯದಾಗಿರುತ್ತದೆ. ಒಂದು ಮರದ ಗುಣವು ಅದು ಕೊಡುವ ಫಲದಿಂದ ನಿಶ್ಚಯವಾಗಿರುತ್ತದೆ. ನಮ್ಮಲ್ಲಿರುವ ಠೇವಣಿಯು, ನಾವು ಯಾವ ರೀತಿ ಫಲಗಳನ್ನು ಕೊಡುವೆವೆಂಬುದನ್ನು ನಿಶ್ಚಯಿಸುತ್ತದೆ. ಅಲ್ಲದೆ ಇದು ನಮ್ಮ ಜೀವಿತದಲ್ಲಿ ನಾವು ಯಾವುದಕ್ಕೆ ಜನ್ಮ ಕೊಡುತ್ತೇವೆಯೆಂಬುದನ್ನು ತಿಳಿಸುತ್ತದೆ. ನಮ್ಮಲ್ಲಿರುವಂತಹದ್ದು ನಮ್ಮ ಜೀವಿತದಿಂದ ಬಿಡುಗಡೆಗೊಳ್ಳುವುದನ್ನು ನಿಶ್ಚಯಿಸುತ್ತದೆ. ಆದುದರಿಂದ ದೇವರು ನಮ್ಮಲ್ಲಿರುವ ಠೇವಣಿಯ ಸಂಯೋಗದಿಂದ ತನ್ನ ಕಾರ್ಯಗಳನ್ನು ನಮ್ಮ ಮೂಲಕ ಬಿಡುಗಡೆ ಮಾಡುತ್ತಾನೆ. ಹಾಗಾಗಿ ನಮ್ಮಲ್ಲಿ ಆಗಲೇ ಠೇವಣಿಗೊಂಡಿರುವುದು ಮತ್ತು ಠೇವಣಿ ಕ್ರೂಢೀಕರಿಸುತ್ತಲೇ ಇರುವುದು ಬಹಳ ಪ್ರಾಮುಖ್ಯ.

## ಠೇವಣಿ ಹೇಗೆ ಮಾಡಲ್ಪಟ್ಟಿದೆ?

### ದೇವರು ನಮ್ಮ ಜೀವಿತಗಳಲ್ಲಿ ವಿಷಯಗಳನ್ನು ಠೇವಣಿಯಿಡುತ್ತಾನೆ.

**"ಯೋಹಾನನು ಹೇಳಿದ್ದೇನೆಂದರೆ, ಪರಲೋಕದಿಂದ ಅನುಗ್ರಹಿಸೋಣವಾದದ್ದನ್ನೇ ಹೊರತು ಮನುಷ್ಯನು ಹೆಚ್ಚೇನು ಹೊಂದಲಾರನು"**(ಯೋಹಾನ 3:27)

ದೇವರು ನಮ್ಮ ಜೀವಿತಗಳಲ್ಲಿ ವಸ್ತುಗಳನ್ನು ಠೇವಣಿಯಿಡುತ್ತಾನೆ. ಠೇವಣಿ ಅಥವಾ ಒಳ್ಳೆಯ ಬೊಕ್ಕಸ ನಮ್ಮಲ್ಲಿರುವುದಾದರೆ ಅದು ದೇವರಿಂದ ಇಟ್ಟಲ್ಪಟ್ಟಿದೆ. ನಮ್ಮಲ್ಲಿರುವಂಥದ್ದಕ್ಕೆ ಆತನೇ ಮೂಲವಾಗಿದ್ದಾನೆ. ದೇವರು ನಮ್ಮನ್ನು ಆರಿಸಿಕೊಂಡರೆ ನಮ್ಮಲ್ಲಿ ಅನೇಕ ವಿಷಯಗಳನ್ನು ಠೇವಣಿಯಿಡುತ್ತಾನೆ, ವರಗಳು, ಅಭಿಷೇಕ ಮತ್ತು ಪ್ರಸಕ್ತವಾಗಿ ಅಧೀನ ಪಡಿಸಿಕೊಳ್ಳದ ಬೇರೆ ಸಾಮರ್ಥ್ಯಗಳನ್ನು ಠೇವಣಿಯಿಡುತ್ತಾನೆ.

## ಬೇರೆ ಜನರು ಸಹ ನಮ್ಮ ಜೀವಿತಗಳಲ್ಲಿ ವಸ್ತುಗಳನ್ನು ಠೇವಣಿಯಿಡಬಹುದು

**‘‘ಕಬ್ಬಿಣವು ಕಬ್ಬಿಣವನ್ನು ಹೇಗೋ ಮಿತ್ರನು ಮಿತ್ರನ ಬುದ್ಧಿಯನ್ನು ಹಾಗೆ ಹರಿತ ಮಾಡುವನು.** (ಜ್ಞಾನೋಕ್ತಿ 27:17)

ನಮ್ಮ ಜೊತೆಯಲ್ಲಿರುವ ಜನರು ಒಳ್ಳೆಯ ಅಥವಾ ಕೆಟ್ಟ ವಸ್ತುಗಳನ್ನು ಠೇವಣಿಯಿಡುತ್ತಾರೆ. ನಾವು ಧರ್ಮೋಪದೇಶಕಾಂಡ ಓದುವಾಗ ದೇವರು ಮೋಶೆ ಮತ್ತು ಯೆಹೋಶುವನ ನಡುವೆ ಸಂಬಂಧ ಏರ್ಪಡಿಸುತ್ತಾನೆ ಎಂದು ನೋಡುತ್ತೇವೆ. (ಧರ್ಮೋಪದೇಶಕಾಂಡ 1:38). ದೇವರು ಮೋಶೆಗೆ ನೀನು ಹೋಗಿ ನೋನನ ಮಗನಾದ ಯೆಹೋಶುವನನ್ನು ನಾಯಕನಾಗಿದ್ದಾನೆಂದು ಆಜ್ಞಾಪಿಸಬೇಕೆಂದು ತಿಳಿಸಿದನು (ಅರಣ್ಯಕಾಂಡ 27:18-23). ಮೋಶೆಯ ಅಭಿಷೇಕವು ಯಹೋಶುವನಿಗೆ ಹರಿದು ಬಂತು. ಮೋಶೆಯು ನೋನನ ಮಗನಾದ ಯೆಹೋಶುವನ ಮೇಲೆ ಕೈಯಿಟ್ಟುದರಿಂದ ಅವನು ಜ್ಞಾನವರಸಂಪನ್ನನಾದನು (ಧರ್ಮೋಪದೇಶಕಾಂಡ 34:9). ಒಬ್ಬರಿಂದ ಮತ್ತೊಬ್ಬರಿಗೆ ಯಾವುದಾದರೊಂದು ಠೇವಣಿ ದೊರೆಯುತ್ತದೆ. ಒಳ್ಳೆಯ ಠೇವಣಿಗಳು ಬೇರೆ ಜನರ ಮೂಲಕ ನಮ್ಮ ಜೀವಿತಗಳಿಗೆ ಬಂದು ಸೇರುತ್ತದೆ. ಆದುದರಿಂದ ನಾವುಗಳು ಉದ್ದೇಶಪೂರ್ವಕವಾಗಿ ಜನರನ್ನು ಆರಿಸಿಕೊಳ್ಳಬೇಕು, ಯಾಕೆಂದರೆ ಅನೇಕ  ಒಳ್ಳೆಯ ವಸ್ತುಗಳು ಅಥವಾ ವಿಷಯಗಳು ಉದ್ದೇಶ ಪೂರ್ವಕವಾಗಿ ನಮ್ಮ ಜೀವಿತದಲ್ಲಿ ಠೇವಣಿಯಾಗುವವು.

## ನಮ್ಮ ವೈಯಕ್ತಿಕ ಜೀವಿತಗಳಲ್ಲಿ ನಾವು ವಿಷಯಗಳ ಠೇವಣಿಯಿಡಬಹುದು.

**ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ, ಅದರೊಳಗಿಂದ ಜೀವಧಾರೆಗಳು ಹೊರಡುವವು** (ಜ್ಞಾನೋಕ್ತಿ 4:23).

ನಮ್ಮ ವೈಯಕ್ತಿಕ ಜೀವಿತದಲ್ಲಿ ಇರುವ ಠೇವಣಿಯನ್ನು ನಾವು ನಿಶ್ಚಯಿಸಬಹುದು. ದೇವರ ವಾಕ್ಯವನ್ನು ತಪ್ಪದೇ ಅಧ್ಯಯನ ಮಾಡುವುದರಿಂದ, ಕೆಲವು ಜನರೊಂದಿಗೆ ಸಮಯ ಕಳೆಯುವುದರಿಂದ ಮತ್ತು ಕೆಲವು ಕ್ಷೇತ್ರಗಳಲ್ಲಿ ತರಭೇತಿ ಪಡೆದುಕೊಳ್ಳುವುದರಿಂದ ಉದ್ದೇಶಪೂರ್ವಕವಾಗಿ ಠೇವಣಿಯಿಟ್ಟುಕೊಳ್ಳಬಹುದು. ಯಾವಾಗ ನಮ್ಮಲ್ಲಿ ಒಳ್ಳೆಯ ಬೊಕ್ಕಸವಿರುತ್ತದೆಯೋ ಆಗ ನಮ್ಮನ್ನು ಪ್ರವೃತ್ತಿಗೊಳಿಸುತ್ತೇವೆ. ಅಥವಾ ನಮ್ಮ ಮೂಲಕ ಒಳ್ಳೆಯ ವಿಷಯಗಳು ಜನಿಸುವ ಸ್ಥಳಗಳಲ್ಲಿ ನಮ್ಮನ್ನು ಭದ್ರಪಡಿಸಿಕೊಳ್ಳುತ್ತೇವೆ.

ದೇವರು ನಮ್ಮ ಮೂಲಕ ಬಿಡುಗಡೆ ಮಾಡುವ ಕೆಲಸಗಳನ್ನು ಅರ್ಥಮಾಡಿಕೊಂಡಾಗ, ನಮ್ಮ ಜೀವಿತಗಳಲ್ಲಿ ಅವೇ ಒಳ್ಳೆಯ ವಿಷಯಗಳ ಠೇವಣಿಯಿಡಬೇಕು, ಯಾಕೆಂದರೆ ದೇವರ ಕೆಲಸಗಳು ನನ್ನಲ್ಲಿ ಜನಿಸಲು ಇದು ಸಹಾಯಮಾಡುತ್ತದೆ. ನಾವು ಇದನ್ನು ಅನೇಕ ವಿಧಗಳಲ್ಲಿ ಮಾಡಬಹುದು. ನಮ್ಮ ಜೀವಿತಕ್ಕೆ ಬೇಕಾದ ಠೇವಣಿಯಲ್ಲಿ ಪಾಲು ಕೊಡುವಂತೆ ದೇವರಲ್ಲಿ ಕೇಳುವದು ಅಥವಾ ಠೇವಣಿಯಲ್ಲಿ ಪಾಲುಕೊಡುವ ಜನರೊಂದಿಗೆ ಸಮಯ ಕಳೆಯುವುದು ಅಥವಾ ಅವಶ್ಯಕ ತರಭೇತಿಯನ್ನು ಹೊಂದಿಕೊಳ್ಳುವುದು. ಠೇವಣಿ ನಮ್ಮೊಳಗಿದ್ದರೆ ಮಾತ್ರ ಅದು ಮುಂದೆ ಬರುತ್ತದೆ. ಆದರೆ ಮೊದಲೇ ಭದ್ರಪಡಿಸಿದ ವಸ್ತುವನ್ನು ಹೊರಗೆ ತರುವುದು ಅಸಾಧ್ಯ ಉದಾಹರಣೆಗೆ ನೀವು ಒಬ್ಬ ಸಭಾಪಾಲಕರಾಗಿ ಹೊಸ ಸಭೆಯನ್ನು ಸ್ಥಾಪಿಸಿದ್ದರೆ, ಸಭೆಯು ಬೆಳೆಯಬೇಕು, ಸಂಖ್ಯೆಯಲ್ಲಿ ಹೆಚ್ಚಬೇಕು ಬಲಗೊಂಡ ಪ್ರಭಾವಶಾಲಿ ಸಭೆಯಾಗಿರಬೇಕೆಂದು ದೇವರು ಇಚ್ಛೈಪಡುತ್ತಾನೆ. ಈಗ ಇಂತಹ ಪ್ರಭಾವಶಾಲಿ ಕಾರ್ಯ ಜರುಗಬೇಕಾದರೆ ಎಂತಹ ಠೇವಣಿಯನ್ನು ಕ್ರೋಢೀಕರಿಸಬೇಕೆಂದು ನೀವು ನಿಶ್ಚಯಮಾಡಿಕೊಳ್ಳಬೇಕು. ನಿಮಗೆ ದೇವರ ವಾಕ್ಯದ ಬಹುದೊಡ್ಡ ಠೇವಣಿಬೇಕು, ದೇವರ ಅಭಿಷೇಕದ ಬಹುದೊಡ್ಡ ಠೇವಣಿ ಬೇಕು, ಸಭೆಯಲ್ಲಿ ಸರಿಯಾದ ತೀರ್ಮಾನಗಳನ್ನು ಮಾಡಲು, ಸಭೆಯನ್ನು ಮುನ್ನೆಡೆಸಲು ಒಳ್ಳೆಯ ಸಭಾ ಸಂಸ್ಥೆ ಮತ್ತು ಕಾರ್ಯ ನಿರ್ವಹಣಾ ಕೌಶಲ್ಯಗಳಿಗೆ ಬಹುದೊಡ್ಡ ಜ್ಞಾನಬೇಕು. ಆದುದರಿಂದ, ದೇವರ ವಾಕ್ಯವನ್ನು ಅಧ್ಯಯನ ಮಾಡಬೇಕು, ಅಭಿಷೇಕದಲ್ಲಿ ಹೆಚ್ಚಳವಾಗಬೇಕು, ಮತ್ತು ಒಳ್ಳೆಯ ಸಭೆಯ ಕಾರ್ಯ ನಿರ್ವಹಣಾ ಕೌಶಲ್ಯತೆಯನ್ನು ಕಲಿತುಕೊಳ್ಳುವುದು ಮತ್ತು ಇಂತಹ ಎಲ್ಲಾ ವಿಷಯಗಳನ್ನು ನಿಮ್ಮಲ್ಲಿ ಠೇವಣಿ ಇಟ್ಟುಕೊಳ್ಳಬೇಕು. ಇದರಿಂದ ಸಭೆಗೆ ಸಂಬಂಧಿಸಿದ ಅನೇಕ ವಿಷಯಗಳು ನಿಮ್ಮ ಮೂಲಕ ಜನಿಸುತ್ತವೆ.

**ಠೇವಣಿಗಳು (ಭದ್ರಪಡಿಸಿದ ವಸ್ತು)**

- ➢ ನಮ್ಮ ಜೀವಿತಗಳಲ್ಲಿ ದೇವರು ವಿಷಯಗಳ ಠೇವಣಿಯಿಡುತ್ತಾನೆ.
- ➢ ಬೇರೆ ಜನರು ಸಹ ನಮ್ಮ ಜೀವಿತದಲ್ಲಿ ಠೇವಣಿಯಿಡಬಹುದು.
- ➢ ನಮ್ಮ ವೈಯಕ್ತಿಕ ಜೀವಿತದೊಳಕ್ಕೆ ನಾವು ವಿಷಯಗಳ ಠೇವಣಿಯಿಡಬಹುದು.

# 4

# ಪ್ರಾರ್ಥನೆಯಿಂದ ಜನನ ನೀಡುವುದು

ಪ್ರಾರ್ಥನೆಯ ಮೂಲಕ ನಮ್ಮ ಜೀವಿತಗಳಲ್ಲಿ ದೇವರ ಉದ್ದೇಶಗಳಿಗೆ ಜನ್ಮ ನೀಡುತ್ತೇವೆ. ದೇವರ ಕಾರ್ಯಗಳು ಭೂಮಿಯ ಮೇಲೆ ಕಾಣಿಸಿಕೊಳ್ಳುವಂತೆ ಮಾಡಲು ಪ್ರಾರ್ಥನೆಯು ಜನ್ಮ ನೀಡುವ ಕಾರ್ಯಗತಿಯಾಗಿದೆ.

## ಪ್ರಾರ್ಥನೆಯಲ್ಲಿ ನೀವು ದೇವರ ಉದ್ಧೇಶಗಳ ಪ್ರಜ್ಞೆ ಪಡೆಯುತ್ತೀರಿ

**‘‘ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧ ಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮದ ಮೂಲಕ ಅದನ್ನು ಪ್ರಕಟಿಸಿದನು ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ’’** (1 ಕೊರಿಂಥದವರಿಗೆ 2:9,10).

**‘‘ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ. ಹೊರತು ಮನುಷ್ಯರ ಸಂಗಡ ಆಡುವದಿಲ್ಲ ಅವನು ಆತ್ಮ ಪ್ರೇರಿತನಾಗಿ ರಹಸ್ಯಾರ್ಥಗಳನ್ನು ನುಡಿಯುತ್ತಿದ್ದರೂ ಯಾರು ತಿಳುಕೊಳ್ಳುವುದಿಲ್ಲ’’** (1 ಕೊರಿಂಥದವರಿಗೆ 14:2).

ಮಾನವ ಕುಲಕ್ಕಾಗಿ ದೇವರು ಹಲವು ಯೋಜನೆಗಳನ್ನು, ಉದ್ಧೇಶಗಳನ್ನು ಇಟ್ಟುಕೊಂಡಿದ್ದಾನೆ. ದೇವರು ಪ್ರತಿಯೊಬ್ಬನ ವೈಯಕ್ತಿಕ ಜೀವಿತಕ್ಕೆ ಹಲವು ಯೋಜನೆಗಳನ್ನು ವಿಷಯಗಳನ್ನು ಸಿದ್ಧಪಡಿಸಿದ್ದಾನೆ.

‘‘ನಾವು ಆತನ ನಿರ್ಮಾಣ ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು’’ (ಎಫೆಸದವರಿಗೆ 2:10). ನಮ್ಮಲ್ಲಿರುವ ಕೆಲವರಲ್ಲಿ ತಮ್ಮ ಜೀವಿತಕ್ಕಿರುವ ದೇವರ ಉದ್ಧೇಶಗಳ ಸ್ಪಷ್ಟತೆಯಿಲ್ಲದಿರಬಹುದು ಮತ್ತು ಅದು ರಹಸ್ಯವಾಗಿ ಕಾಣಬಹುದು. ಹೇಗಿದ್ದರೂ ದೇವರ ಮನಸ್ಸು ದೇವರ ಆತ್ಮನಿಗೆ ಗೊತ್ತು. ದೇವರ ಆಳವಾದ ವಿಷಯಗಳು, ಯೋಜನೆಗಳು, ಉದ್ಧೇಶಗಳು ಇದನ್ನು ಪವಿತ್ರಾತ್ಮನು ತಿಳಿದವನಾಗಿದ್ದಾನೆ, ಯಾಕೆಂದರೆ

ಆತನು ಸ್ವತಹ ದೇವರೇ. ಪವಿತ್ರಾತ್ಮನು ನಮಗೆ ದೇವರ ಯೋಜನೆ ಉದ್ಧೇಶಗಳನ್ನು ಪ್ರಚುರಪಡಿಸುತ್ತಾನೆ. ಇದು ಪ್ರಾರ್ಥನೆಯಿಂದ ಸಾಧ್ಯವಾಗುತ್ತದೆ.

## ಆತ್ಮನಲ್ಲಿ ಪ್ರಾರ್ಥಿಸುವಾಗ ದೇವರ ಉದ್ಧೇಶಗಳ ಅಸ್ಥಿತ್ವವನ್ನು ಪ್ರಾರ್ಥಿಸುತ್ತಿದ್ದೀರಿ

ಅನ್ಯ ಭಾಷೆಯಲ್ಲಿ ಪ್ರಾರ್ಥಿಸುವಾಗ (ಆತ್ಮನಲ್ಲಿ ಪ್ರಾರ್ಥಿಸುವಾಗ) ಉಂಟಾಗುವ ಬಲಯುತ ಲಾಭವೆಂದರೆ, ನಾವು ರಹಸ್ಯಾರ್ಥವುಳ್ಳವುಗಳನ್ನು ಪ್ರಾರ್ಥಿಸುತ್ತಿದ್ದೇವೆ. ನಾವು ಆತ್ಮನಲ್ಲಿ ಪ್ರಾರ್ಥಿಸುವಾಗ ನಮ್ಮ ಜೀವಿತಕ್ಕಿರುವ ದೇವರ ಉದ್ಧೇಶ ಯೋಜನೆಗಳನ್ನು ಕುರಿತು ಪ್ರಾರ್ಥಿಸುತ್ತಿರುತ್ತೇವೆ, ಆಗ ಅದು ಗುಪ್ತವಾದುದು ಅಥವಾ ನಮಗೆ ರಹಸ್ಯವಾಗಿರಬಹುದು. ಪ್ರಾರ್ಥನೆಯಲ್ಲಿ ನಮ್ಮ ಮೂಲಕ ದೇವರು ಜನನ ನೀಡುವ ವಿಷಯಗಳನ್ನು ಪ್ರಚುರಪಡಿಸುತ್ತಾನೆ. ನಾವು ಪ್ರಾರ್ಥಿಸುವಾಗ ಕಲ್ಪನೆಗಳು ಮೂಡುತ್ತವೆ, ಮತ್ತು ಆತ್ಮದಲ್ಲಿ ದೇವರ ಉದ್ಧೇಶಗಳು ತುಂಬಲ್ಪಡುತ್ತವೆ, ಮತ್ತು ಆತ್ಮಿಕ ಕ್ಷೇತ್ರದಲ್ಲಿ ದೇವರ ಉದ್ಧೇಶಗಳಿಗೆ ನಾವು ರೂಪಕೊಡುತ್ತೇವೆ. ಇನ್ನೂ ಆ ಉದ್ಧೇಶಗಳಿಗೆ ಜನನ ಮತ್ತು ಬಿಡುಗಡೆಗೆ ಸ್ಥಳ ದೊರಕದಿರಬಹುದು. ಆದರೆ ಗರ್ಭಧಾರಣೆ ಸಮಯದಿಂದ ಹೆರಿಗೆಯವರೆಗೂ ತನ್ನದೇ ಆದ ಅವಧಿ ಅಥವಾ ಬೆಳವಣಿಗೆಯ ಹಂತವಿದೆ - ಒಳಗಿನ ಬೆಳವಣಿಗೆ ಮತ್ತು ಕಾಣದಿರುವ ಕ್ಷೇತ್ರದ ಬೆಳವಣಿಗೆಯು ಇರುತ್ತದೆ. ಇದು ನಾವು ಆತ್ಮನಿಂದ ಪ್ರಾರ್ಥಿಸುವಾಗ ಜರುಗುವ ಕಾರ್ಯವಾಗಿದೆ. ನಾವು ಪ್ರಾರಂಭದಲ್ಲಿ ಯಾವುದೇ ಬದಲಾವಣೆ ಕಾಣದಿರಬಹುದು, ಆತ್ಮಿಕ ಕ್ಷೇತ್ರದಲ್ಲಿ ದೇವರ ಉದ್ಧೇಶಗಳು ಭೂಮಿಯ ಮೇಲೆ ಹುಟ್ಟುವಾಗ ಸಮಯಕ್ಕೆ ಸಮೀಪವಾಗಿ ರೂಪುಗೊಂಡು ಕಾಣಿಸಿಕೊಳ್ಳುತ್ತವೆ. ಆದುದರಿಂದ ದೇವರು ನಮ್ಮಲ್ಲಿ ಯಾವುದಾದರೂ ಆಲೋಚನೆ ಅಥವಾ ದರ್ಶನದ ಮೂಲಕ ಯಾವುದಾದರೂ ವಿಷಯುಗಳನ್ನು  ಬಿಡುಗಡೆಮಾಡಬೇಕೆಂದಿದ್ದರೆ ನಾವು ಅವುಗಳಿಗಾಗಿ ಪ್ರಾರ್ಥಿಸುವವರಾಗಿರಬೇಕು. ಸರಿಯಾದ ಸಮಯಕ್ಕೆ ಪೂರ್ಣಸಮಯಕ್ಕೆ ಆತನ ಉದ್ಧೇಶಗಳು ಭೂಮಿಯ ಮೇಲೆ ಜನ್ಮ ತಾಳುತ್ತವೆ.

## ಪ್ರಾರ್ಥನೆಯು ದೇವರ ಚಿತ್ತದೊಂದಿಗೆ ನಿಮ್ಮ ಚಿತ್ತವನ್ನು ಸಾಲುಗೊಳಿಸುತ್ತದೆ.

**‘‘ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡ ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ**

**ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು. ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು** (ಇಬ್ರಿಯರಿಗೆ 5:7-9).

**'ಮತ್ತು ಅವರಿಗೆ ''ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗಿದೆ, ನೀವು ಇಲ್ಲೇ ಇದ್ದು ನನ್ನ ಸಂಗಡ ಎಚ್ಚರವಾಗಿರಿ'' ಎಂದು ಹೇಳಿ ಸ್ವಲ್ಪ ಮುಂದೆ ಹೋಗಿ ಬೋರಲಬಿದ್ದು - '' ನನ್ನ ತಂದೆಯೇ ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ'' ತಿರುಗಿ ಎರಡನೆಯ ಸಾರಿ ಹೋಗಿ ''ನನ್ನ ತಂದೆಯೇ, ನಾನು ಕುಡಿದ ಹೊರತು ಈ ಪಾತ್ರೆ ಬಿಟ್ಟು ಹೋಗಕೂಡದಾಗಿದ್ದರೆ ನಿನ್ನ ಚಿತ್ತವೇ ಆಗಲಿ'' ಎಂದು ಪ್ರಾರ್ಥನೆಮಾಡಿದನು** (ಮತ್ತಾಯ 26: 38,39,42).

ದೇವಕುಮಾರನು ವಿಧೇಯತೆಯನ್ನುಳ್ಳವನಾಗಬೇಕಾಯಿತು ಎಂಬುದನ್ನು ಅರ್ಥಮಾಡಿಕೊಳ್ಳುವುದು ನಮ್ಮ ಮನಸ್ಸಿಗೆ ಕಷ್ಟವಾಗಬಹುದು ಆದಾಗ್ಯೂ ಮಗನು ತಂದೆಯ ಮೇಲೆ ಇಟ್ಟ ''ದೈವಿಕ ಪೂಜ್ಯತೆ'' ಅಥವಾ ''ದೈವಿಕ ಭಯ'' ವನ್ನು ಮೇಲಿನ ವಚನಗಳು ಪ್ರಚುರಪಡಿಸುತ್ತವೆ. ಗೆತ್ಸೇಮನೆ ತೋಟದಲ್ಲಿ ಆತನು ಯಜ್ಞದ ಬಲಿಯಾಗಿ ತನ್ನ ಮರಣದ ಸಮಯ ತಲುಪಿದಾಗ ಅಥವಾ ಅದನ್ನು ಎದುರುಗೊಂಡಾಗ, ಆತನು ಮಾಡಿದ ಪ್ರಾರ್ಥನೆ ಪ್ರಾಣಸಂಕಟದ ಸ್ಥಿತಿ ಮತ್ತು ಬಲವಾದ ಕಣ್ಣೀರಿನ ಭಾರವಾದ ಮಧ್ಯಸ್ಥಿಕೆಯ ಪ್ರಾರ್ಥನೆಯಾಗಿತ್ತು. ಅಲ್ಲದೇ ಕ್ರಿಸ್ತನು ತಂದೆಯ ಚಿತ್ತಕ್ಕೆ ''ಹೌದು'' ಎಂದು ಹೇಳುವ ಹಂತ ತಲುಪಿದನು. ಈ ಒಂದು ದುಃಖಪಟ್ಟು ಮನಗುಂದಿ ಮಾಡಿದ ಪ್ರಾರ್ಥನೆಯು ''ತಂದೆಯ ಚಿತ್ತ''ಕ್ಕೆ ''ಮಗನ ಚಿತ್ತ'' ವನ್ನು ಸಾಲುಗೊಳಿಸಿತು, ಅಂದರೆ ತಾನು ಸಾಯುವಷ್ಟು ವಿಧೇಯನಾಗುವವರೆಗೂ ಮುಂದುವರೆಯಿತು. ನಮ್ಮ ಜೀವಿತಗಳಲ್ಲೂ ಸಹ ಆಗಾಗ್ಗೆ ನಾವು ಪ್ರಾರ್ಥಿಸುವಾಗ ''ನಮ್ಮ ಚಿತ್ತವು'' ''ದೇವರ ಚಿತ್ತಕ್ಕೆ ಪೂರ್ಣ ಅಧೀನವಾಗದ ಸ್ಥಿತಿಯನ್ನು ತಲುಪಬಹುದು. ಆದರೆ ತಂದೆಯ ಪ್ರಸನ್ನತೆಯಲ್ಲಿ ನಾವು ಪ್ರಾರ್ಥಿಸುವಾಗ ಅದು ಗೋಚರಕ್ಕೆ ಬರುತ್ತದೆ. ಮತ್ತು ''ನಮ್ಮ ಚಿತ್ತವು'' ''ಆತನ ಚಿತ್ತಕ್ಕೆ'' ಸಂಪೂರ್ಣವಾಗಿ ಸಾಲುಗೊಳ್ಳುತ್ತದೆ. ನಾವು ನಮ್ಮ ಪ್ರಾರ್ಥನಾ ಸಮಯದಿಂದ ''ಕರ್ತನೆ ನಿನ್ನ ಚಿತ್ತವೇ ನೇರವೇರಲಿ'' ಎಂದು ಹೇಳುವ ಹಂತಕ್ಕೆ ಬರುತ್ತೇವೆ.

ಹೀಗೆ ದೇವರ ಉದ್ದೇಶಗಳು ಕಾಣದ ಕ್ಷೇತ್ರದಲ್ಲಿ ರೂಪಗೊಂಡು ಅಸ್ತಿತ್ವ ಪಡೆದು ಪ್ರಾಕೃತಿಕವಾಗಿ ಬಿಡುಗಡೆಯಾಗುವುದಕ್ಕೆ ಪ್ರಾರ್ಥನೆ ಮಾತ್ರ ಸಹಾಯ ಮಾಡುವುದಲ್ಲದೆ ''ನಮ್ಮ ಚಿತ್ತ''ವನ್ನು ''ದೇವರ ಚಿತ್ತಕ್ಕೆ'' ಸಾಲುಗೊಳಿಸಲು ಸಹಾಯ ಮಾಡುತ್ತದೆ.

ಆದುದರಿಂದ ನಾವು ಭೂಮಿಯ ಮೇಲೆ ಆತನ ಉದ್ದೇಶಗಳನ್ನು ಹೊತ್ತುಕೊಳ್ಳಲು ಸಿದ್ಧವಾಗಿರುತ್ತೇವೆ.

**ಪ್ರಾರ್ಥನೆ**

- ಪ್ರಾರ್ಥನೆಯಲ್ಲಿ ನೀವು ದೇವರ ಉದ್ದೇಶಗಳನ್ನು ಪ್ರಜ್ಞೆ ಪಡೆಯುತ್ತೀರಿ.
- ಆತ್ಮದಲ್ಲಿ ಪ್ರಾರ್ಥಿಸುವಾಗ ದೇವರ ಉದ್ದೇಶಗಳ ಅಸ್ತಿತ್ವವನ್ನು ಪ್ರಾರ್ಥಿಸುತ್ತಿದ್ದಿರಿ.
- ಪ್ರಾರ್ಥನೆಯು ದೇವರ ಚಿತ್ತದೊಂದಿಗೆ ನಿಮ್ಮ ಚಿತ್ತವನ್ನು ಸಾಲುಗೊಳಿಸುತ್ತದೆ.

# 5
# ನುಡಿದ ವಚನ

ನಾವು ನುಡಿಯುವಂತಹ ವಚನಗಳು ಅನೇಕ ವೇಳೆ ಭೂಮಿಯ ಮೇಲೆ ದೇವರ ಉದ್ದೇಶಗಳನ್ನು ಸಾಧಿಸುವ ಸಾಧನಗಳಾಗಿರುತ್ತವೆ. ನಮ್ಮ ಮಾತುಗಳು ನಮ್ಮ ವರ್ತಮಾನ, ಭವಿಷ್ಯದ ವಿಷಯಗಳಿಗೆ ಪ್ರಭಾವವನ್ನು ಮತ್ತು ರೂಪವನ್ನು ನೀಡುತ್ತವೆ.

## ನಿಮ್ಮ ಜೀವಿತವನ್ನು ದೇವರ ಉದ್ದೇಶಗಳ ಜೊತೆಗೆ ಕಿಚ್ಚು ಹತ್ತಿಸುವ ಮಾತುಗಳನ್ನು ಬಿಡುಗಡೆ ಮಾಡಬೇಕು.

**''ನಾಲಿಗೆಯೂ ಕಿಚ್ಚೇ. ನಾಲಿಗೆಯು ಅಧರ್ಮಲೋಕ ರೂಪವಾಗಿ ನಮ್ಮ ಅಂಗಗಳ ನಡುವೆ ಇಟ್ಟಿದೆ. ಅದು ದೇಹವನ್ನೆಲ್ಲಾ ಕೆಡಿಸುತ್ತದೆ. ತಾನೇ ನರಕದಿಂದ ಬೆಂಕಿಹತ್ತಿಸಿಕೊಳ್ಳುತ್ತಾ ಪ್ರಪಂಚವೆಂಬ ಚಕ್ರಕ್ಕೆ ಬೆಂಕಿಹಚ್ಚುತ್ತಿದೆ''** (ಯಾಕೋಬ 3:6).

ನಾಲಿಗೆಯು 'ಬೆಂಕಿ' ಅಥವಾ 'ಕಿಚ್ಚು' ಎಂಬುದಾಗಿ ಉಲ್ಲೇಖಿಸಲ್ಪಟ್ಟಿದೆ. ಇದು ನಾಲಿಗೆಯು ಒಂದು ಪ್ರಭಾವಶಾಲಿ ಅಂಗ ಎಂಬುದನ್ನು ಸೂಚಿಸುತ್ತದೆ. ಈ ಮೇಲ್ಕಂಡ ವಚನಗಳು ''ದುರಾತ್ಮನ ನಾಲಿಗೆ'' ಯಿಂದ ಪ್ರಭಾವಿತವಾದ ಅಂದರೆ ದುಷ್ಟ (ಕೆಟ್ಟ) ಮಾತುಗಳನ್ನಾಡುವ ನಾಲಿಗೆಯ ಕುರಿತು ಮಾತಾಡುತ್ತದೆ.

ಕೆಟ್ಟ ನಾಲಿಗೆಯು, ಪಾಪದ ಪ್ರಪಂಚದ, ಒಳ್ಳೆಯ ನಾಲಿಗೆಯು, ಆಶೀರ್ವಾದದ ಪ್ರಪಂಚವಾಗಿದೆ (ಯಾಕೋಬ 3:6). ಕೆಟ್ಟ ನಾಲಿಗೆಯು ದೇಹವನ್ನೆಲ್ಲಾ ಕೆಡಿಸುತ್ತದೆ. ಒಳ್ಳೆ ನಾಲಿಗೆಯು ಇಡೀ ದೇಹವನ್ನೆಲ್ಲಾ ಆಶೀರ್ವಾದಗೊಳಿಸುತ್ತದೆ. ಇಲ್ಲಿರುವ ಮುಖ್ಯ ಸಂದೇಶವೇನೆಂದರೆ ನಮ್ಮ ನಾಲಿಗೆಯು ನಮ್ಮ ಪೂರ್ಣ ಅಸ್ಥಿತ್ವದ ಮೇಲೆ ಪ್ರಭಾವ ಬೀರುತ್ತದೆ. ನಮ್ಮ ನಾಲಿಗೆಯು, ನಮ್ಮ ಬದುಕಿನ ದಾರಿಯ ಮೇಲೂ ಪ್ರಭಾವ ಬೀರುತ್ತದೆ. ನಮ್ಮ ಜೀವನಕ್ಕೆ ನಾಲಿಗೆಯಿಂದ ಕಿಚ್ಚು ಹತ್ತುತ್ತದೆ'' ಇದು ನಾವು ಮಾತಾಡುವ ಮಾತುಗಳಿಂದ ಪ್ರಭಾವಿತವಾಗಿದೆ.

ಕೆಟ್ಟ ನಾಲಿಗೆಯು ಕಿಚ್ಚು ಹತ್ತಿಸಿಕೊಂಡಿದೆ ಅಥವಾ ತಾನೇ ನರಕದಿಂದ ಬೆಂಕಿ ಹತ್ತಿಸಿಕೊಳ್ಳುತ್ತದೆ. ಆದರೆ ಆಶೀರ್ವಾದದ 'ಪ್ರಪಂಚ'- ಮತ್ತು ಅಭಿಷೇಕದ

ನಾಲಿಗೆಯು ದೇವರು, ಆತನ ಮಾತು ಆತನ ಆತ್ಮನಿಂದ ಬೆಂಕಿಹತ್ತಿಸಿಕೊಳ್ಳುತ್ತದೆ. ಈ ನಾಲಿಗೆಯು ಪೂರ್ಣ ದೇಹವನ್ನು ಅಥವಾ ಅಂಗಾಂಗಗಳನ್ನು ಆಶೀರ್ವದಿಸುತ್ತದೆ. ಈ ನಾಲಿಗೆಯು ದೇವರು ನಮಗಾಗಿ ಇಟ್ಟಿರುವ ಆಶೀರ್ವಾದದೊಟ್ಟಿಗೆ ನಮ್ಮ ಜೀವಿತವನ್ನು ಸಾಲುಗೊಳಿಸುತ್ತದೆ. ಈ ನಾಲಿಗೆಯು ಭೂಮಿಯ ಮೇಲೆ ದೇವರ ಉದ್ದೇಶಗಳನ್ನು ಬಿಡುಗಡೆ ಮಾಡುವ ನಾಲಿಗೆಯಾಗಿದೆ.

ನಾಲಿಗೆಯು ಅಧರ್ಮಲೋಕರೂಪವಾಗಿರಬಹುದು ಅಥವಾ ಲೋಕಕ್ಕೆ ಆಶೀರ್ವಾದ ಮಾಡುವುದಾಗಿರಬಹುದು. ನಾವು ಮಾತಾನಾಡುವ ಮಾತುಗಳಿಂದ ದೇವರ ಉದ್ದೇಶಗಳಿಗೆ ಜನ್ಮ ನೀಡುತ್ತೇವೆ. ದೇವರ ಯೋಜನೆ, ಉದ್ದೇಶಗಳ ಜೊತೆ ನಮ್ಮ ಬದುಕಿನ ದಾರಿಯಲ್ಲಿ ''ಕಿಚ್ಚು ಹತ್ತಿಸುವ'' ಮಾತುಗಳನ್ನು ನಾವು ಬಿಡುಗಡೆ ಮಾಡಬೇಕು. ಅಲ್ಲದೆ ದೈವಿಕ ಸಂಗತಿಗಳು ಅಸ್ಥಿತ್ವಕ್ಕೆ ಬರುವ ಮಾತುಗಳನ್ನು ಆಡಬೇಕು.

## ದೇವರ ವಾಕ್ಯ ಮಾತನಾಡುವುದರಿಂದ ನಿಮ್ಮ ಜಗತ್ತನ್ನು ರೂಪಿಸಿರಿ

**''ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ''** (ಇಬ್ರಿಯರಿಗೆ 11:3).

ನೈಸರ್ಗಿಕವಾದುವು, ಆತ್ಮಿಕವಾದವುಗಳಿಂದ ಮಾಡಲ್ಪಟ್ಟಿವೆ. ಕಾಣುವಂತದ್ದು ಕಾಣದೇ ಇರುವುದರಿಂದ ಬಂದದ್ದಾಗಿದೆ. ''ದೇವರು ನುಡಿದ ಮಾತುಗಳು'' - ಕಾಣದಿರುವ ಮತ್ತು ಆತ್ಮಿಕ ಮೂಲ ವಸ್ತುಗಳ ಪ್ರಕೃತಿಗೆ ಜನ್ಮಕೊಡಲು ಉಪಯೋಗಿಸಲ್ಪಟ್ಟಿದ್ದಾಗಿದೆ. ಹೀಗೆ ದೇವರ ವಾಕ್ಯವು - ನೈಸರ್ಗಿಕ ಕ್ಷೇತ್ರದಲ್ಲಿ ಅನೇಕ ವಿಷಯಗಳನ್ನು ರೂಪಿಸುತ್ತದೆ, ಆಕಾರಕೊಡುತ್ತದೆ, ಜನ್ಮ ನೀಡುತ್ತದೆ, ಸೃಷ್ಟಿಸುತ್ತದೆ ಮತ್ತು ಅಸ್ಥಿತ್ವಗೊಳಿಸುತ್ತದೆ. ನಮ್ಮೆಲ್ಲರ ಜೀವಿತ, ಯಾವ ರೀತಿ ಇರಬೇಕೆಂಬುದನ್ನು ನಿಶ್ಚಯ ಮಾಡಿಕೊಳ್ಳಲು ದೇವರ ಮಾತುಗಳನ್ನು ನಮ್ಮ ಜೀವನಗಳೊಳಕ್ಕೆ ನುಡಿಯಲು, ದೇವರು ನಮಗೆ ಅಧಿಕಾರವನ್ನು ಮತ್ತು ಯೋಗ್ಯತೆಯನ್ನು ಕೊಟ್ಟಿದ್ದಾನೆ.

ದೇವರ ಉದ್ದೇಶಗಳನ್ನು ಯೋಜನೆಗಳನ್ನು ದರ್ಶನಗಳನ್ನು ನಿಮ್ಮ ನಿಮ್ಮ ಜೀವಿತಗಳೊಳಕ್ಕೆ ನುಡಿದುಕೊಳ್ಳಿರಿ.

## ಪ್ರಾರ್ಥನೆ

- ನಿಮ್ಮ ಜೀವಿತವನ್ನು ದೇವರ ಉದ್ದೇಶಗಳ ಜೊತೆಗೆ ಕಿಚ್ಚು ಹತ್ತಿಸುವ ಮಾತುಗಳನ್ನು ಬಿಡುಗಡೆ ಮಾಡಬೇಕು.
- ದೇವರ ವಾಕ್ಯ ಮಾತಾಡುವುದರಿಂದ ನಿಮ್ಮ ಜಗತ್ತನ್ನು ರೂಪಿಸಿರಿ.
- ನಿಮ್ಮ ಜೀವಿತಗಳೊಳಕ್ಕೆ ದರ್ಶನಗಳು, ಯೋಜನೆ, ದೇವರ ಉದ್ದೇಶಗಳನ್ನು ನುಡಿಯಿರಿ.

# 6

# ಚುರುಕು ಅಥವಾ ಪರಿಶ್ರಮಶೀಲ ಕೆಲಸ

**''ಜೋಲುಗೈ ದಾರಿದ್ರ್ಯ, ಚುರುಕುಗೈ ಐಶ್ವರ್ಯ''** (ಜ್ಞಾನೋಕಿ 10:4)

**''ಸೋಮಾರಿಯ ಆಶೆಯು ವ್ಯರ್ಥ; ಉದ್ಯೋಗಿಯ ಆತ್ಮಕ್ಕೆ ಪುಷ್ಟಿ''** (ಜ್ಞಾನೋಕಿ 13:4)

**''ಆದರೆ ನಾನು ಎಂದವನಾಗಿದ್ದೇನೋ ದೇವರ ಕೃಪೆಯಿಂದಲೇ ಅಂಥವನಾಗಿದ್ದೇನೆ. ನನಗುಂಟಾದ ಆತನ ಕೃಪೆಯು ನಿಷ್ಫಲವಾಗಲಿಲ್ಲ; ನಾನು ಅವರೆಲ್ಲರಿಗಿಂತ ಹೆಚ್ಚಾಗಿ ಪ್ರಯಾಸಪಟ್ಟೆನು. ಆದರೆ ಪ್ರಯಾಸಪಟ್ಟವನು ನಾನಲ್ಲ, ನನ್ನೊಂದಿಗಿರುವ ದೇವರ ಕೃಪೆಯೇ''** (1 ಕೊರಿಂಥದವರಿಗೆ 15:10).

ಒಬ್ಬನು ರಕ್ತ, ಬೆವರು, ಕಣ್ಣೀರು ಸುರಿಸಿ ಕನಸುಗಳನ್ನು ಒಂದುಗೂಡಿಸಿದರೆ ಮಾತ್ರ ಕನಸುಗಳು ಕಾರ್ಯರೂಪಕ್ಕೆ ಬರುತ್ತವೆ.! ದೇವರ ಉದ್ದೇಶಗಳಿಗೆ ಜನ್ಮ ನೀಡಲು ನಮ್ಮಿಂದ ಪರಿಶ್ರಮಶೀಲ ಕೆಲಸ ಅವಶ್ಯ.

''ಅಳುತ್ತಾ ಬಿತ್ತುವವರು ಹಾಡುತ್ತಾ ಕೊಯ್ಯುವರು'' (ಕೀರ್ತನೆ 126:5) ನಾವು ಮೊದಲು ಅಳುತ್ತಾ ಬಿತ್ತದಿದ್ದರೆ, ಹಾಡುತ್ತಾ ಕೊಯ್ಯಲು ಸಾಧ್ಯವಿಲ್ಲ. ನಮಗೆ ದೇವರು ಕೊಟ್ಟ ದರ್ಶನ ಅಥವಾ ಕನಸುಗಳಿರಬಹುದು ಇವುಗಳು ನೆರವೇರಬೇಕಾದರೆ ಸಮರ್ಥ ಕಾರ್ಯಗಳು, ಬರುವಂತಹ ಹೋರಾಟಗಳು, ಸಮಸ್ಯೆಗಳನ್ನು ಎದುರಿಸಿ ಅವುಗಳನ್ನು ನೆರವೇರಿಸಿಕೊಳ್ಳಬೇಕು. ನಾವು ಒಂದು ಇಟ್ಟಿಗೆಯನ್ನು ಇನ್ನೊಂದರ ಮೇಲೆ ಇಟ್ಟು ಕಟ್ಟಿ, ಮುಂದುವರೆದರೆ ತಕ್ಷಣವೇ ಗಾಳಿ ಬಂದು ಕೆಲವು ಇಟ್ಟಿಗಳನ್ನು ಬೀಳಿಸಬಹುದು. ಆದರೆ ನಾವು ಬಿದ್ದಂತಹ ಇಟ್ಟಿಗೆಗಳನ್ನು ಎತ್ತಿ ತಿರುಗಿಕಟ್ಟಿಕೊಂಡು ಕಟ್ಟುವ ಕಾರ್ಯದಲ್ಲಿ ಮುಂದುವರೆಯುತ್ತಿರಬೇಕು. ದೇವರ ಉದ್ದೇಶಗಳ ಜನನಕ್ಕೆ ಪರಿಶ್ರಮಶೀಲ ಅಥವಾ ಚುರುಕು ಕೆಲಸ ಬಹಳ ಅಗತ್ಯ.

ದೇವರು ನಮ್ಮನ್ನು ಕನಸು ಕಾಣುವವರಾಗುವಂತೆ ಕರೆಯದೇ ಆತನ ರಾಜ್ಯಕ್ಕೆ ಕೆಲಸ ಮಾಡುವ ಕೆಲಸಗಾರನಾಗಲು ಕರೆದಿದ್ದಾನೆ. ನಾವು ಸುವಾರ್ತೆ ಸೇವೆಯ ಕಾರ್ಯದ ಕನಸು ಕಾಣಲು ಕರೆಯಲ್ಪಡದೇ, ಸುವಾರ್ತೆ ಸೇವೆಯ ಕಾರ್ಯ ಮಾಡಲು ಕರೆಯಲ್ಪಟ್ಟಿದ್ದೇವೆ.

ಎಲ್ಲಾ ರೀತಿಯ ಸಂಕಷ್ಟದ ಸ್ಥಿತಿಗಳಲ್ಲೂ, ವಿರೋಧಗಳ ಮಧ್ಯದಲ್ಲೂ ಕೆಲಸ ಮುಂದುವರೆಸಿದರೆ ನಮ್ಮ ಕನಸುಗಳು ಯಶಸ್ವಿಯಾಗುತ್ತವೆ. ಪ್ರತಿಯೊಬ್ಬರ ಮೂಲಕ ದೇವರು ತನ್ನ ಉದ್ದೇಶಗಳಿಗೆ ಜನನ ನೀಡುತ್ತಾನೆ. ಎಂದು ನಾನು ನಂಬುತ್ತೇನೆ. ''ದೇವರೇ ದೊಡ್ಡ ಕನಸುಗಳನ್ನು ಕಂಡೆನು ಆದರೆ ಯಾವುದನ್ನು ಪೂರ್ತಿಗೊಳಿಸಲಿಲ್ಲ'' ಎಂದು ಹೇಳುತ್ತಾ ಪರಲೋಕಕ್ಕೆ ಹೋಗಬೇಡಿರಿ. ಬದಲಾಗಿ ಭೂಮಿಯ ಮೇಲೆ ದೇವರು ನಮ್ಮ ಮೂಲಕ ಜನಿಸುವಂತೆ ಉದ್ದೇಶಿಸಿದ ತನ್ನ ಎಲ್ಲಾ ಉದ್ದೇಶಗಳಿಗೆ ನಾವು ಜನನ ನೀಡಿದ್ದೇವೆ ಎಂಬ ಸತ್ಯವನ್ನು ಅರಿತು ಪರಲೋಕಕ್ಕೆ ಹೋಗಬೇಕು.

**ಪರಿಶ್ರಮಶೀಲ ಕೆಲಸ**

- ನೀವು ಬೆವರು ಸುರಿಸಿದಾಗ ಕನಸುಗಳು ಅಸ್ಥಿತ್ವಗೊಳ್ಳುತ್ತವೆ.
- ಪರಿಶ್ರಮಶೀಲ ಕೆಲಸ ದೇವರ ಉದ್ದೇಶಗಳಿಗೆ ಜನ್ಮ ನೀಡುತ್ತದೆ.
- ನಮ್ಮೆಲ್ಲರ ಜೀವಿತಗಳಿಗಿರುವ ದೇವರ ಉದ್ದೇಶಗಳನ್ನು ಪೂರ್ತಿಗೊಳಿಸೋಣ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

## ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ದೇವರು ತನ್ನ ಉದ್ದೇಶಗಳನ್ನು ಭೂಮಿಯ ಮೇಲೆ ಬಿಡುಗಡೆಗೊಳಿಸಲು ಅನೇಕ ಬಾರಿ ದೇವಧೂತರನ್ನು ಸಾಧನವಾಗಿ ಉಪಯೋಗಿಸಿದ್ದಾನೆ. ಹಲವು ಬಾರಿ ಮಾನವನ ಮೂಲಕ ಬಿಡುಗಡೆಗೊಳಿಸಿದ್ದಾನೆ. ದೇವರು ಭೂಮಿಯ ಮೇಲೆ ತನ್ನ ಉದ್ದೇಶಗಳನ್ನು ಸಾಮಾನ್ಯರಾದ ನನ್ನ ಮತ್ತು ನಿಮ್ಮ ಮೂಲಕ ಬಿಡುಗಡೆ ಮಾಡುತ್ತಾನೆಂಬುದು ಇದರ ಅರ್ಥವಾಗಿದೆ

ನೀವು ದೇವರೊಂದಿಗೆ ನಡೆಯುವಾಗ ಆತನು ಭೂಮಿಯ ಮೇಲೆ ನಿಮ್ಮ ಮೂಲಕ ಬಿಡುಗಡೆ ಮಾಡಲಿರುವ ಉದ್ದೇಶಗಳನ್ನು ಯೋಜನೆಗಳನ್ನು ಕಂಡುಕೊಳ್ಳುವಿರಿ. ಇದರಲ್ಲಿ ಹಲವು ಅರ್ಥಗರ್ಭಿತವಾದವು - ಕನ್ಯೆಮರಿಯಳಲ್ಲಿ ದೇವಕುಮಾರನ ಜನನ ಇದಕ್ಕೆ ಮುಖ್ಯ ಉದಾಹರಣೆ, ಮತ್ತೆ ಕೆಲವು ಅರ್ಥಗರ್ಭಿತವಾದವುಗಳಲ್ಲ - ಉದಾಹರಣೆ ನಾಗರೀಕತೆಯ ಅರಿವಿಲ್ಲದ ಹಳ್ಳಿಯಲ್ಲಿ ಒಂದು ಶಿಶುವಿಹಾರ ಸ್ಥಾಪಿಸಿದರೆ ಅದು ಯಾರ ಗಮನಕ್ಕೂ ಬಾರದಾಗಿರುತ್ತದೆ. ಆದಾಗ್ಯೂ ಆತನ ಪ್ರತಿ ಕಾರ್ಯವೂ ಭೂಮಿಯ ಮೇಲೆ ಬಿಡುಗಡೆಗೊಂಡದ್ದಾಗಿದೆ.

ಈ ಪುಸ್ತಕವು ದೇವರ ಉದ್ದೇಶಗಳಿಗೆ ಭೂಮಿಯ ಮೇಲೆ ಜನ್ಮ ನೀಡುವ ಪರಿಜ್ಞಾನವನ್ನು ಒಳಗೊಂಡಿದೆ ಆದುದರಿಂದ ನಿಮ್ಮ ಜೀವಿತದ ಮೂಲಕ ದೇವರ ಕಾರ್ಯಗಳನ್ನು ಬಿಡುಗಡೆಗೊಳಿಸಿರಿ.

ಆಶಿಷ್ ರಾಯ್‌ಚೂರ್


**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org


ALL PEOPLES CHURCH